# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 11-02-2014 ರಂದು ಬೆಳಿಗ್ಗೆ 10-30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ಪೌರ ಸಭಾಂಗಣದ ಅಧ್ಯಕ್ಷರ ಕೊಠಡಿ ಸಂಖ್ಯೆ: ೨೦೫ ರಲ್ಲಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವ ಸಂಬಂಧ ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| 1. **ಶ್ರೀ. ಕೆ. ಉಮೇಶ್ ಶೆಟ್ಟಿ** : ಅಧ್ಯಕ್ಷರು<br>2. ಶ್ರೀ ಎಲ್.ರಮೇಶ್ : ಸದಸ್ಯರು<br>3. ಶ್ರೀ. ಬಿ.ಆರ್. ಚಂದ್ರಶೇಖರ್ : ಸದಸ್ಯರು<br>4. ಶ್ರೀಮತಿ ಚೇತನ ಗೌಡ : ಸದಸ್ಯರು<br>5. ಶ್ರೀಮತಿ ಸುಮಿತ್ರಾ. ವಿ : ಸದಸ್ಯರು<br>6. ಶ್ರೀ. ಎನ್. ವೀರಣ್ಣ : ಸದಸ್ಯರು<br>7. ಶ್ರೀ ಕೆ. ದೊಡ್ಡಣ್ಣ : ಸದಸ್ಯರು<br>8. ಶ್ರೀ ಎಸ್.ಎಂ. ಮುರುಗೇಶ್ ಮೊದಲಿಯರ್ : ಸದಸ್ಯರು<br>9. ಶ್ರೀಮತಿ ಫರೀಧ : ಸದಸ್ಯರು<br>10. ಶ್ರೀಮತಿ ಫೌಜೀಯಾ ಬೇಗಂ : ಸದಸ್ಯರು<br>11. ಶ್ರೀಮತಿ ಟಿ.ಎ.ಗಾಯತ್ರಿ : ಸದಸ್ಯರು | 1. ಕೌನ್ಸಿಲ್ ಕಾರ್ಯದರ್ಶಿಗಳು<br>2. ತಹಶೀಲ್ದಾರ (ಆಸ್ತಿಗಳು)<br>3. ತಹಶೀಲ್ದಾರ (ಭೂಸ್ವಾಧೀನ)<br>4. ಸಹಾಯಕ ಕಂದಾಯ ಅಧಿಕಾರಿಗಳು/ ಮಾಹಾಲಕ್ಷ್ಮೀಪುರ/ ಪುಲಕೇಶಿನಗರ/ ಮಲ್ಲೇಶ್ವರಂ/ ಶಿವಾಜಿನಗರ/ |

ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು.

ಮಾನ್ಯ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಸಮಿತಿ ಸದಸ್ಯರಿಗೆ ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರಿದರು.

**ವಿಷಯದ ಸಂಖ್ಯೆ: ನಯೋಅಸ್ಥಾಸ/95/2012-13**

ಮಾನ್ಯ ಆಯುಕ್ತರ ದಿ: 16-01-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗಕ್ಕೆ ಬರುವ ವಾರ್ಡ್-61 ಎಸ್.ಕೆ. ಗಾರ್ಡನ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತಿನ ಅಳತೆ 100X200 ಅಡಿಗಳ ನಿವೇಶನವನ್ನು 30 ವರ್ಷಗಳಿಗೆ ದಿನಾಂಕ:02-10-1975 ರಿಂದ 01-10-2005ರ ವರೆವಿಗೆ ಅಧ್ಯಕ್ಷರು ಕುಂಬಾರ ಕರಕುಶಲ ಕಾರ್ಮಿಕರ ಸಂಘ ನ್ಯೂ ಪಾಟರಿ ಟೌನ್,

ವಾರ್ಡ್–61 ಬೆಂಗಳೂರು–05 ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/332/ಎಂ.ಎನ್.ಜಿ/75 ದಿನಾಂಕ: 30–08–1975ರಲ್ಲಿ ವಾರ್ಷಿಕ ರೂ.500/–ಗಳ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ದಿನಾಂಕ:01–10–2005 ರಂದು ಗುತ್ತಿಗೆಗೆ ನೀಡಿರುವ ಅವಧಿಯು ಪೂರ್ಣಗೊಂಡಿರುವುದರಿಂದ ನಗರ ಪಾಲಿಕೆ ಸ್ವತ್ತನ್ನು ನಗರ ಪಾಲಿಕೆಗೆ ಹಿಂದಿರುಗಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:02–08–2010 ರಂದು ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ನವೀಕರಿಸಲು ಶೇ 50% ರಷ್ಟು ರಿಯಾಯಿತಿ ನೀಡಿ ಕ್ರಯಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ15/ಎಂಎನ್‌ಜಿ/2006 ದಿನಾಂಕ:06–05–2006 ರಂತೆ ಸದರಿಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅದರಂತೆ, ಗುತ್ತಿಗೆಗೆ ನೀಡಿರುವ ನಗರ ಪಾಲಿಕೆ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಕೆ.ಪಿ.ಪಿ.ಕಾಯ್ದೆ 4 ರಂತೆ ಅಧ್ಯಕ್ಷರು ಕುಂಬಾರ ಕರಕುಶಲ ಸಂಘಕ್ಕೆ ನೋಟೀಸ್ ಜಾರಿಗೊಳಿಸಿದ್ದು, ಪುನ: ದಿ:17–09–2010 ರಂದು ಕೆ.ಪಿ.ಪಿ.ಕಾಯ್ದೆ 5 ಫಾರಂ 'ಬಿ' ರ ಪ್ರಕಾರ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ನೋಟೀಸ್ ಜಾರಿಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ.ಕಣ್ಣನ್ ಮತ್ತು ಶ್ರೀ. ವೆಂಕಟರಾಮಯ್ಯ ಶೆಟ್ಟಿ ಎಂಬುವವರು ಸದರಿಯವರಿಗೆ ನಗರ ಪಾಲಿಕೆ ವತಿಯಿಂದ ನೀಡಿರುವ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಸ್ವತ್ತನ್ನು ಹಿಂಪಡೆಯಲು ದೂರು ಅರ್ಜಿ ಸಹ ಸಲ್ಲಿಸಿರುತ್ತಾರೆ. ಈ ಮಧ್ಯೆ ಸಂಘದವರು ಮಾನ್ಯ ವಸತಿ ಹಾಗೂ ವಾರ್ತಾ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಶಿಫಾರಸ್ಸು ಪತ್ರವನ್ನು ನೀಡಿ, ಸದರಿ ಸಂಘಕ್ಕೆ ಮುಂದಿನ 50 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: 19–2010–11, ಬೆಂಗಳೂರು ದಿನಾಂಕ:21–09–2011 ರಂತೆ, ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ವಸತಿಗೆ ಚದರ ಅಡಿ 1ಕ್ಕೆ ರೂ.3500/– ಗಳಿದ್ದು, ಸ್ವತ್ತಿನ ವಿಸ್ತೀರ್ಣ 100X200=20,000 ಚದರ ಅಡಿಗಳಿದ್ದು, ಸ್ವತ್ತಿನ ಮೌಲ್ಯ ರೂ.7,00,00,000/–ಗಳಾಗುತ್ತದೆ. ಮಾರುಕಟ್ಟೆ ದರದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 70,00,000/–ರೂಗಳಾಗುತ್ತದೆ. ಮಾಸಿಕ ರೂ.5,83,400/–ಗಳಾಗುತ್ತದೆ. ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ದಿನಾಂಕದವರೆಗೆ ಹಳೆಯ ದರದಂತೆ, ನಂತರದ ವರ್ಷಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ಅವಧಿಯನ್ನು ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸ್ಥಳ ಪರಿಶೀಲಿಸಿ ದಿನಾಂಕ:20–06–2011ರ ಸಭೆ ನಡುವಳಿಯಲ್ಲಿ ಸದರಿ ಸ್ಥಳದಲ್ಲಿ ಹಲವಾರು ಕುಟುಂಬಗಳು ವಾಸವಿರುವುದು ಕಂಡು ಬಂದಿರುತ್ತದೆ. ಸದರಿ ಸ್ವತ್ತನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸದರಿ ಸ್ಥಳದಲ್ಲಿ ವಾಸವಿರುವ ಕುಟುಂಬಗಳು ಕುಂಬಾರ ಕರ ಕುಶಲ ಕೈಗಾರಿಕಾ ಸಹಾಕರ ಸಂಘ ಸದಸ್ಯರುಗಳೇ ಹಾಗೂ ಅವರುಗಳು ತಮ್ಮ ಕುಲ

ಕಸುಬನ್ನು ಮಾಡುತ್ತಿದ್ದಾರೆಯೇ ಮತ್ತು ಸ್ವತ್ತನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದಾಗಿ ಬಂದಿರುವ ದೂರುಗಳು ನ್ಯಾಯ ಸಮ್ಮತವಾಗಿವೆಯೇ ಎಂಬುದನ್ನು ಪರಿಶೀಲಿಸಿ ಮರು ಮಂಡಿಸಲು ಕಡತವನ್ನು ಹಿಂದಿರುಗಿಸಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ದಿನಾಂಕ: 11-03-2011 ರಂದು ಉಪ ಆಯುಕ್ತರು (ಆಸ್ತಿಗಳು) ರವರು ಸ್ಥಳ ಪರಿಶೀಲಿಸಿ ನೀಡಿರುವ ವರದಿಯನ್ನು ಮತ್ತೊಮ್ಮೆ ಪ್ರಸ್ತಾಪಿಸಿ ಮುಂದಿನ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿಗೆ ಸಲ್ಲಿಸಲು ಕಳುಹಿಸಿರುತ್ತಾರೆ. ಸ್ಥಳ ಪರಿಶೀಲನಾ ವರದಿಯನ್ನು ಟಿಪ್ಪಣಿಯೊಂದಿಗೆ ಲಗತ್ತಿಸಿ ಕಳುಹಿಸಿದೆ.

ಸದರಿ ಸಂಘಕ್ಕೆ ನೀಡಿರುವ ಗುತ್ತಿಗೆ ಅವಧಿಯು ದಿ:01-10-2005 ರಂದು ಮುಕ್ತಾಯಗೊಂಡಿದ್ದು, 5 ವರ್ಷಗಳಿಗೆ ಗುತ್ತಿಗೆ ನವೀಕರಿಸಿದಲ್ಲಿ, 2011 ಕ್ಕೆ ಮುಕ್ತಾಯವಾಗುತ್ತದೆ. ಆದುದರಿಂದ, ಸದರಿ ಗುತ್ತಿಗೆಯನ್ನು 30 ವರ್ಷಗಳಿಗೆ ನವೀಕರಿಸಲು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಸಂಘಕ್ಕೆ ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾಪಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 16-01-2013ರ ಟಿಪ್ಪಣಿ.

**ಸ್ಥಳ ತಪಾಸಣೆಗೆ ಮುಂದೂಡಲಾಗಿದೆ.**

**ವಿಷಯದ ಸಂಖ್ಯೆ: ನಯೋಅಸ್ಥಾಸ/31/2013-14**

ಮಾನ್ಯ ಆಯುಕ್ತರ ದಿ: 07-01-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರು ವಾರ್ಡ್ ಸಂಖ್ಯೆ: 90 ರಲ್ಲಿನ ಹಲಸೂರು ಕೆರೆಯಲ್ಲಿ ದೋಣಿ ವಿಹಾರದ ಶುಲ್ಕ ವಸೂಲಾತಿ ಗುತ್ತಿಗೆಯನ್ನು ನವೀಕರಿಸಲು ಕೋರಿರುತ್ತಾರೆ. ಹಲಸೂರಿನ ಕೆರೆಯಲ್ಲಿ ದೋಣಿ ವಿಹಾರದ ಶುಲ್ಕ ವಸೂಲಾತಿಯ ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ: 01-07-2007 ರಿಂದ 30-06-2008 ರವರೆಗೆ ವಾರ್ಷಿಕ ಗುತ್ತಿಗೆ ರೂ. 1,50,000/- ಗಳನ್ನು ನಿಗಧಿಪಡಿಸಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಬಿವೃದ್ಧಿ ನಿಗಮ ನಿಯಮಿತ ರವರಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಗುತ್ತಿಗೆ ಅವಧಿ ಮುಗಿದ ನಂತರವು ಸಹ ಸದರಿ ಸಂಸ್ಥೆಯವರಿಗೆ ಪತ್ರ ಬರೆದು ಗುತ್ತಿಗೆಯನ್ನು ನವೀಕರಿಸಿಕೊಳ್ಳುವಂತೆ ಸೂಚಿಸಲಾಗಿ, ದಿನಾಂಕ: 13-09-2010ರಂದು ಮನವಿ ಪತ್ರವನ್ನು ಸಲ್ಲಿಸಿ ಗುತ್ತಿಗೆ ಅವಧಿಯನ್ನು 10 ವರ್ಷಗಳ ಅವಧಿಗೆ ಮುಂದುವರಿಸಲು ಕೋರಿರುತ್ತಾರೆ.

ದೋಣಿ ವಿಹಾರದ ಗುತ್ತಿಗೆಯನ್ನು ದಿನಾಂಕ: 01-08-2008 ರಿಂದ 5 ವರ್ಷಗಳಿಗೆ ಗುತ್ತಿಗೆ ಮೊತ್ತ ರೂ. 2,00,000/- ರಂತೆ ನಿಗಧಿಪಡಿಸಿ ಗುತ್ತಿಗೆಯನ್ನು ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲಾಗಿ ಸ್ಥಾಯಿ ಸಮಿತಿಯ ದಿನಾಂಕ: 25-01-2011 ರಂದು ವಿಷಯದ ಸಂಖ್ಯೆ:39/10-11ರಲ್ಲಿ ಸದರಿಯವರಿಗೆ 5 ವರ್ಷಗಳ ಗುತ್ತಿಗೆಯನ್ನು ನವೀಕರಿಸಲು ಅನುಮತಿ ನೀಡಲಾಗಿರುತ್ತದೆ, ನಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಗಳ ವಿಷಯದ ಸಂಖ್ಯೆ: 346/10-11 ದಿನಾಂಕ: 08-04-2011ರ ತೀರ್ಮಾನದ ಬಗ್ಗೆ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ: 20(31)11-12 ದಿನಾಂಕ: 31-05-

2011ರಂದು ಸದರಿ ಸಂಸ್ಥೆಗೆ ನೀಡಿರುವ ಗುತ್ತಿಗೆ ಅವಧಿ ಮುಗಿದಿರುವುದರಿಂದ ದೋಣಿ ವಿಹಾರ ನಡೆಸಲು ಗುತ್ತಿಗೆಯನ್ನು ಹರಾಜು ಮುಖಾಂತರ ನೀಡಲು ತೀರ್ಮಾನಿಸಲಾಗಿರುತ್ತದೆ.

ಪಾಲಿಕೆಯ ತೀರ್ಮಾನದಂತೆ ಕಡತವನ್ನು ಮುಖ್ಯ ಅಭಿಯಂತರರು (ಕೆರೆಗಳು) ರವರಿಗೆ ಕಳುಹಿಸಿದ್ದು, ಇದುವರೆವಿಗೂ ದೋಣಿ ವಿಹಾರದ ಹರಾಜು ಪ್ರಕ್ರಿಯೆಯನ್ನು ನಡೆಸಿರುವುದಿಲ್ಲ. ಸದರಿ ಗುತ್ತಿಗೆ ಅವಧಿಯು ದಿನಾಂಕ: 31-08-2013ಕ್ಕೆ ಪೂರ್ಣಗೊಂಡಿದ್ದು, ಮೇಲ್ಕಂಡ ಸಂಸ್ಥೆಯವರೇ ದೋಣಿ ವಿಹಾರ ನಡೆಸಿ ಗುತ್ತಿಗೆ ಮೊತ್ತವನ್ನು ವಾರ್ಷಿಕ ರೂ. 2.00,000/- ಗಳಂತೆ 2012-13ನೇ ಸಾಲಿನವರೆವಿಗೆ ಪಾವತಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ: 25-04-2013 ಮತ್ತು 20-06-2013ರ ಪತ್ರದಲ್ಲಿ ಕಳೆದ 26 ವರ್ಷಗಳಿಂದ ದೋಣಿ ವಿಹಾರ ನಿರ್ವಹಿಸುತ್ತಿರುವುದಾಗಿ ಮತ್ತು ಈ ಉದ್ದೇಶಕ್ಕಾಗಿ ಯಾಂತ್ರಿಕ ದೋಣಿಗಳನ್ನು ಹಾಗೂ ಪೆಡಲ್ ಬೋಟ್‌ಗಳನ್ನು ಹೊಂದಿದ್ದು, ಪ್ರಯಾಣಿಕರ ಹಿತದೃಷ್ಟಿಯಿಂದ ನುರಿತ ಹಾಗೂ ಪರವಾನಗಿ ಹೊಂದಿರುವ ಚಾಲಕರನ್ನು ಸಹ ನೇಮಿಸಿಕೊಂಡಿರುವುದಾಗಿ ಪರವಾನಗಿಯನ್ನು ಮುಂದಿನ 5 ವರ್ಷಗಳಿಗೆ ಮುಂದುವರೆಸಬೇಕೆಂದು ಕೋರಿರುವ ಸಂಸ್ಥೆಯವರ ಮನವಿ ಬಗ್ಗೆ ಗುತ್ತಿಗೆ ಮೊತ್ತವನ್ನು ಪುನಃ ಹೆಚ್ಚಿಸಿ ಗುತ್ತಿಗೆಯನ್ನು ನವೀಕರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 07-01-2014ರ ಟಿಪ್ಪಣಿ

**<u>ಸ್ಥಳ ತಪಾಸಣೆಗೆ ಮುಂದೂಡಲಾಗಿದೆ.</u>**

**<u>ವಿಷಯದ ಸಂಖ್ಯೆ: ನಯೋಅಸ್ಥಾಸ/32/2013-14</u>**

ಮಾನ್ಯ ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಂಖ್ಯೆ: 10ರ ರಾಮಚಂದ್ರಪುರ ಮುಖ್ಯರಸ್ತೆಯಲ್ಲಿ ಏಳುಮಂದಮ್ಮ ಬಡಾವಣೆ ಹತ್ತಿರ ಸುಮಾರು 100 ಮೀ.ಉದ್ದದಲ್ಲಿ ನೀರು ಸರಬರಾಜು ಪೈಪುಗಳನ್ನು ಅಳವಡಿಸಲಾಗಿದ್ದು, ರಸ್ತೆ ಅಗಲ ಕೇವಲ 5.30 ಮೀಟರ್‌ನಿಂದ 6.50 ವರೆಗೆ ಮಾತ್ರ ಇದ್ದು ಈ ಸ್ಥಳದಲ್ಲಿ ರಸ್ತೆ ಅಗಲೀಕರಣಕ್ಕಾಗಿ ತುರ್ತಾಗಿ ಭೂಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಜಂಟಿ ಆಯುಕ್ತರು (ಯಲಹಂಕ) ರವರು ಭೂಸ್ವಾಧೀನಪಡಿಸಿಕೊಳ್ಳುವ ಸಲುವಾಗಿ ಈಗಾಗಲೇ ಟಿಪ್ಪಣಿಯನ್ನು ಮಂಡಿಸಿದ್ದು, ಸದರಿ ಟಿಪ್ಪಣಿಯು ಭೂಸ್ವಾಧೀನ ಶಾಖೆಯಿಂದ ಮಂಡಿಸಿದ ಟಿಪ್ಪಣಿಯಾಗಿರುವುದಿಲ್ಲ. ಬದಲಿಗೆ ಮುಖ್ಯ ಅಭಿಯಂತರರು (ಬ್ಯಾಟರಾಯನಪುರ) ರವರು ಟಿಪ್ಪಣಿಯನ್ನು ಮಂಡಿಸಲಾಗಿದ್ದು, ಸದರಿ ಟಿಪ್ಪಣಿಗೆ ವಿಶೇಷ ಆಯುಕ್ತರು (ಯೋಜನೆ) ರವರು ಒಟ್ಟು ವೆಚ್ಚದ ಪೈಕಿ ಶೇ.50 ರಷ್ಟು ಮೊತ್ತವನ್ನು BWSSB ಸಂಸ್ಥೆ ಭರಿಸುವ ಷರತ್ತುಗೊಳಪಟ್ಟು ಹಾಗೂ ಉಳಿದ 50% ಮೊತ್ತವನ್ನು ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಒಪ್ಪಿದಲ್ಲಿ ಟಿಪ್ಪಣಿಯನ್ನು ಮಂಡಿಸಲು ವಿಶೇಷ ಆಯುಕ್ತರು (ಯೋಜನೆ) ರವರು ಅನುಮೋದಿಸಿರುತ್ತಾರೆ. ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ನಿರ್ಣಯ ಸಂಖ್ಯೆ:ತೆಆಸ್ಥಾಸ/232/2012-13, ದಿನಾಂಕ:22-02-2013 ರಲ್ಲಿ ನಿರ್ಣಯವು ಈ ಕೆಳಕಂಡಂತೆ ವಿವರಿಸಿದೆ.

ಕೆ.ಎಂ.ಸಿ.ಕಾಯ್ದೆ ಕಲಂ 175 Proviso (a) ರಂತೆ ಅಗಲೀಕರಣಕ್ಕೆ ಒಳಪಡುವ 14 ಸ್ವತ್ತುಗಳ ಒಟ್ಟು ವಿಸ್ತೀರ್ಣಕ್ಕೆ ನೊಂದಣಿ ಮಾರ್ಗಸೂಚಿ ಬೆಲೆ ಚದರ ಅಡಿ ಒಂದಕ್ಕೆ ರೂ.1200.00 ಇದ್ದು, ಭೂಸ್ವಾಧೀನ ಕಾಯ್ದೆ ನಿಯಮ 129 ರಂತೆ ನೀಡಬಹುದಾಗಿದೆ. Solatium 30% Additional Market Value 12% ಒಟ್ಟು 42% ಹೆಚ್ಚುವರಿಯಾಗಿ ನೀಡಿದಲ್ಲಿ ಚ.ಅಡಿ ವಿಸ್ತೀರ್ಣಕ್ಕೆ ರೂ.1704.00 ಆಗುತ್ತದೆ. ಈ ಭೂಮಿಯನ್ನು ಕಳೆದುಕೊಳ್ಳುವ ಜನ ಹೆಚ್ಚಾಗಿ ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದವರಾಗಿದ್ದು, ಚ.ಅಡಿ 1 ಕ್ಕೆ ರೂ.1800.00 ರಂತೆ ನೀಡಬಹುದಾಗಿದ್ದು, 4441.50 ಚ.ಅಡಿ ವಿಸ್ತೀರ್ಣದ ಮೌಲ್ಯ ರೂ.79,94,700.00 ಗಳಷ್ಟಿದ್ದು, ಸದರಿ ಕಟ್ಟಡಗಳ ಅಂದಾಜು ಮೌಲ್ಯಮಾಪನ ಮಾಡಬೇಕಾಗಿದ್ದು, ಮೇಲ್ನೋಟಕ್ಕೆ ರೂ.10,05,300.00 ಗಳಷ್ಟಿದ್ದು, ಇದರ ಒಟ್ಟು ಕ್ರಯದ ಮೌಲ್ಯ ರೂ.90.00 ಲಕ್ಷಗಳಷ್ಟು ಆಗುತ್ತದೆ.

ಪುಟ 14 ರಲ್ಲಿ ಲಗತ್ತಿಸಿರುವ ನಿರ್ಣಯದಂತೆ ಈ ಒಟ್ಟು ವೆಚ್ಚದಲ್ಲಿ ಶೇ.50%ರಷ್ಟು BWSSB ಯಿಂದ ಭರಿಸಿ, ಉಳಿಕೆ ಶೇ. 50% ರಷ್ಟು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಭರಿಸಲು ತೀರ್ಮಾನಿಸಿದಂತೆ ಬಿಬಿಎಂಪಿ ಭರಿಸುವ ಹಣ ರೂ.45.00 ಲಕ್ಷಗಳು ಆಗುತ್ತದೆ.

ಭೂಸ್ವಾಧೀನಕ್ಕಾಗಿ ನಮೂನೆ 'ಡಿ' ಯನ್ನು ಭರ್ತಿಮಾಡಿ ರೂ.45.00 ಲಕ್ಷಗಳನ್ನು 2013–14 ನೇ ಸಾಲಿನ ಬಿಬಿಎಂಪಿ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ–0001 ರಲ್ಲಿ ಅನುಮೋದನೆ ಹಾಗೂ ಜಾಬ್ ಕೋಡ್ ಸಂಖ್ಯೆ ನೀಡಲು ಮಾನ್ಯ ಆಯುಕ್ತರ ಆದೇಶ ಕೋರಿ ಜಂಟಿ ಆಯುಕ್ತರು (ಯಲಹಂಕ) ರವರು ಕಡತವನ್ನು ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರಿಗೆ ಮಂಡಿಸಿ ಕೌನ್ಸಿಲ್ ಸಭೆಯ ಮುಂದೆ ಮಂಡಿಸಲು ಕಡತವನ್ನು ಉಪ ಆಯುಕ್ತರು (ಭೂಸ್ವಾಧೀನ) ರವರಿಗೆ ಸಲ್ಲಿಸಿರುತ್ತಾರೆ.

**ಭೂಸ್ವಾಧೀನಕ್ಕೆ ಒಳಪಡುವ ಸ್ವತ್ತುಗಳ ವಿವರ ಈ ಕೆಳಕಂಡಂತಿರುತ್ತದೆ.**

**ವಾರ್ಡ್ ನಂ.10, ರಾಮಚಂದ್ರ ಪುರ ಗ್ರಾಮ**

| ಕ್ರ. ಸಂ | ಗ್ರಾಮದ ಹೆಸರು | ಮಾಲೀಕರ/ ಅನುಭವದಾರರ ಹೆಸರು | ಖಾತೆ ಸಂಖ್ಯೆ | ಭೂಸ್ವಾಧೀನಕ್ಕೆ ಒಳಪಡುವ ಅಂದಾಜು ವಿಸ್ತೀರ್ಣ ಚ.ಅಡಿ ಗಳಲ್ಲಿ | ಷರಾ |
|---|---|---|---|---|---|
| 1 | ರಾಮಚಂದ್ರಪುರ | ಶ್ರೀ.ಡಿ.ಮುನಿರಾಜು | 186/1<br>184/1 | 372 ಚ.ಅಡಿ | ಖಾಲಿ ಜಾಗ |
| 2 | ರಾಮಚಂದ್ರಪುರ | ಶ್ರೀ.ತಿಮ್ಮರಾಯಪ್ಪ ಬಿನ್ ಬಜ್ಜಪ್ಪ | 186/185 | 349 ಚ.ಅಡಿ | ಕಟ್ಟಡ+ ಖಾಲಿಜಾಗ |
| 3 | ರಾಮಚಂದ್ರಪುರ | ಶ್ರೀ.ಡಿ.ಮುನಿರಾಜು | 183/181 | 355 ಚ.ಅಡಿ | ಖಾಲಿ ಜಾಗ |
| 4 | ರಾಮಚಂದ್ರಪುರ | ಶ್ರೀ.ಡಿ.ಲೋಕೇಶ್ | 180/178<br>182/180 | 414 ಚ.ಅಡಿ | ಕಟ್ಟಡ+ ಖಾಲಿಜಾಗ |
| 5 | ರಾಮಚಂದ್ರಪುರ | ಶ್ರೀ.ಟಿ.ರವಿಕುಮಾರ್ | 178/176 | 335 ಚ.ಅಡಿ | ಕಟ್ಟಡ+ ಖಾಲಿಜಾಗ |
| 6 | ರಾಮಚಂದ್ರಪುರ | ಶ್ರೀ.ಜಾಯ್ ಥಾಮಸ್ | 175/173 | 218 ಚ.ಅಡಿ | ಕಟ್ಟಡ+ ಖಾಲಿಜಾಗ |

| | | | | | |
|---|---|---|---|---|---|
| 7 | ರಾಮಚಂದ್ರಪುರ | ಖಾಲಿ | – | 108 ಚ.ಅಡಿ | ಖಾಲಿ ಜಾಗ |
| 8 | ರಾಮಚಂದ್ರಪುರ | ಶ್ರೀ.ಸಲೀಮ್ | ಸರ್ವೆ ನಂ.4 | 60 ಚ.ಅಡಿ | ಕಟ್ಟಡ |
| 9 | ರಾಮಚಂದ್ರಪುರ | ಶ್ರೀ.ಎಂ.ಶ್ರೀರಾಮ್ | 163/161 | 440 ಚ.ಅಡಿ | ಖಾಲಿ ಜಾಗ |
| 10 | ರಾಮಚಂದ್ರಪುರ | ಶ್ರೀ.ಎಂ.ಮುನಿಯಪ್ಪ | 163/161 | 253 ಚ.ಅಡಿ | ಕಟ್ಟಡ+ ಖಾಲಿಜಾಗ |
| 11 | ರಾಮಚಂದ್ರಪುರ | ಹೇಮಾವತಿ | ಖಾತಾ ಇಲ್ಲ | 312 ಚ.ಅಡಿ | ಖಾಲಿ ಜಾಗ |
| 12 | ರಾಮಚಂದ್ರಪುರ | ಶ್ರೀ.ಗುಂಡಪ್ಪ ಬಿನ್ ತಿಪ್ಪಯ್ಯ | 174/172 | 661–50 ಚ.ಅಡಿ | ಕಟ್ಟಡ+ ಖಾಲಿಜಾಗ |
| 13 | ರಾಮಚಂದ್ರಪುರ | ನ್ಯಾಯಾಲಯದಲ್ಲಿ ಪ್ರಕರಣ | – | 192 ಚ.ಅಡಿ | ಕಟ್ಟಡ+ ಖಾಲಿಜಾಗ |
| 14 | ರಾಮಚಂದ್ರಪುರ | ಶ್ರೀ.ಆರ್.ಸಿ.ರವೀಂದ್ರ | 197/198/8 | 372ಚ.ಅಡಿ | ಕಟ್ಟಡ+ ಖಾಲಿಜಾಗ |

ಮೇಲ್ಕಂಡ ಸ್ವತ್ತುಗಳು ಪಾಲಿಕೆ ವ್ಯಾಪ್ತಿಯಲ್ಲಿರುವುದರಿಂದ ಹಾಗೂ ಸದರಿ ಸ್ವತ್ತು ಭೂಪರಿವರ್ತನೆಯಾಗಿರುವ ಜಮೀನಾಗಿರುವುದರಿಂದ ಈ ಸ್ವತ್ತಿಗೆ ವಾಸೋಪಯೋಗಿ ನಿವೇಶನಗಳಿಗೆ ನಿಗಧಿ ಪಡಿಸಲಾಗಿರುವ ದರವನ್ನು ಪರಿಹಾರವಾಗಿ ಪರಿಗಣಿಸುವುದು ಸೂಕ್ತವಾಗಿರುತ್ತದೆ. ಆದ್ದರಿಂದ ಸರ್ಕಾರದ ದಿನಾಂಕ:21–09–2011 ರ ಕೇಂದ್ರ ಮೌಲ್ಯಮಾಪನ ಸಮಿತಿಯ ಅಧಿಸೂಚನೆ ಸಂಖ್ಯೆ:ಸಿವಿಸಿ/19/2010–11 ರ ಮಾರ್ಗಸೂಚಿ ದರದನ್ವಯ ಪ್ರಸ್ತಾಪಿತ ಸ್ವತ್ತಿಗೆ ಚ.ಅಡಿ ಒಂದಕ್ಕೆ ರೂ.1800/– ರಂತೆ ನಿಗಧಿಪಡಿಸಿ ಭೂಪರಿಹಾರ ಮತ್ತು ಇತರೆ ವೆಚ್ಚಗಳನ್ನು ಲೆಕ್ಕಾಚಾರ ಮಾಡಲಾಗಿದ್ದು, ವಿವರ ಈ ಕೆಳಕಂಡಂತಿದೆ.

## "ಅ"– ಭೂಪರಿಹಾರ ವೆಚ್ಚ

| ಕ್ರ.ಸಂ | ವಿವರಣೆ | ಮೊಬಲಗು ರೂ.ಗಳಲ್ಲಿ |
|---|---|---|
| 1 | ದಿನಾಂಕ:21–09–2011 ರ ಸರ್ಕಾರದ ಮಾರ್ಗಸೂಚಿ ದರದಂತೆ ಚ.ಅಡಿ ಒಂದಕ್ಕೆ ರೂ. 1800/– ರಂತೆ 4441.50 ಚ.ಅಡಿಗಳಿಗೆ | 79,94,700/– |
| 2 | ಈ ಮೊಬಲಗಿಗೆ 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(2) ರನ್ವಯ ಶೇ.30 ರಂತೆ ಶಾಸನಬದ್ಧ ಭತ್ಯೆ | 23,98,410/– |
| 3 | 1894 ರ ಭೂಸ್ವಾಧೀನ ಕಾಯ್ದೆಯ ಕಲಂ 23(1)(ಎ) ರನ್ವಯ ಮಾರುಕಟ್ಟೆ ಬೆಲೆ ಶೇ.12 ರಂತೆ ಹೆಚ್ಚುವರಿ ಮಾರುಕಟ್ಟೆ ಬೆಲೆ (ಒಂದು ವರ್ಷಕ್ಕೆ) | 9,59,364/– |
| **ಒಟ್ಟು (1+2+3)** | | **1,13,52,474/–** |

## "ಆ"– ಇತರೆ ವೆಚ್ಚ

| | | |
|---|---|---|
| 4 | ಸಿಬ್ಬಂದಿ ವೆಚ್ಚ ಶೇ.10 ರಷ್ಟು | – |
| 5 | ಆಡಿಟ್ ವೆಚ್ಚ ಶೇ.1 ರಷ್ಟು | – |
| 6 | ಪ್ರಕಟಣಾ ವೆಚ್ಚ (ಅಂದಾಜು) | 2,00,000/– |
| **ಒಟ್ಟು (1+2+3+6)** | | **1,15,52,474** |
| **ಷರಾ:** ದಿನಾಂಕ: 05–09–1963 ರ ಸರ್ಕಾರದ ಅಧಿಸೂಚನೆ ಸಂಖ್ಯೆ: FD 126 RFC 60 ರಂತೆ | | |

| |
|---|
| ಯಾವುದೇ ಸ್ಥಳೀಯ ಸಂಸ್ಥೆಗೆ ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸಲು ಭೂಸ್ವಾಧೀನಾಧಿಕಾರಿಯ ನೇಮಕವಾಗಿದ್ದು, ಸದರಿ ಕಛೇರಿಯ ಸಿಬ್ಬಂದಿ ವೆಚ್ಚವನ್ನು ಆ ಸ್ಥಳೀಯ ಸಂಸ್ಥೆಯೇ ಭರಿಸುತ್ತಿದ್ದಲ್ಲಿ, ಮೇಲಿನ ಕ್ರಮಸಂಖ್ಯೆ 4 ಮತ್ತು 5 ರಲ್ಲಿನ ವೆಚ್ಚಗಳನ್ನು ವಿಧಿಸುವ ಅವಶ್ಯಕತೆ ಇಲ್ಲವೆಂಬ ಆದೇಶವಿರುವುದರಿಂದ , ಈ ಎರಡೂ ವೆಚ್ಚಗಳನ್ನು ಒಟ್ಟು ಭೂಸ್ವಾಧೀನ ಪರಿಹಾರ ಲೆಕ್ಕಾಚಾರದಿಂದ ಕೈಬಿಡಲಾಗಿದೆ. |

**(ಒಂದು ಕೋಟಿ ಹದಿನೈದು ಲಕ್ಷದ ಐವತ್ತೆರಡು ಸಾವಿರದ ನಾಲ್ಕುನೂರ ಎಪ್ಪತ್ನಾಲ್ಕು ರೂ.ಗಳು ಮಾತ್ರ)**

ಮೇಲೆ ನಮೂದಿಸಿರುವ ಸ್ವತ್ತನ್ನು ಭೂಸ್ವಾಧೀನ ಕಾಯ್ದೆಯ ಕಲಂ 1894 ರನ್ವಯ ಭೂಸ್ವಾಧೀನಪಡಿಸಿಕೊಳ್ಳಲು ಹಾಗೂ ಇದಕ್ಕೆ ತಗಲು ಭೂಪರಿಹಾರ ಮತ್ತು ಇತರೆ ವೆಚ್ಚಗಳು ಸೇರಿ ಒಟ್ಟು **ರೂ. ಒಂದು ಕೋಟಿ ಹದಿನೈದು ಲಕ್ಷದ ಐವತ್ತೆರಡು ಸಾವಿರದ ನಾಲ್ಕುನೂರ ಎಪ್ಪತ್ನಾಲ್ಕು ರೂ.ಗಳು ಮಾತ್ರ** ಗಳನ್ನು ಪಾಲಿಕೆಯ 2013-14 ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವ ಅನುದಾನದಿಂದ ಭರಿಸುವ ಬಗ್ಗೆ ಸೂಕ್ತ ತೀರ್ಮಾನ  ಕೈಗೊಳ್ಳಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

## ವಿಷಯದ ಸಂಖ್ಯೆ: ನಯೋಅಸ್ಥಾಸ/33/2013-14

ಮಾನ್ಯ ಆಯುಕ್ತರ ದಿ: 24-01-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ.43, ನಂದಿನಿ ಬಡಾವಣೆಯ ಕಂಠೀರವನಗರ ಕೊಳಚೆ ಪ್ರದೇಶದಲ್ಲಿ 5ನೇ ಕ್ರಾಸ್, ಸ್ವತ್ತಿನ ಸಂಖ್ಯೆ:247ರ ಜಾಗವನ್ನು ಶ್ರೀಮತಿ. ಮಂಜುಳ ಕೋ ಶ್ರೀನಿವಾಸಮೂರ್ತಿ ರವರಿಗೆ 10x35 ಅಡಿಗಳ ಜಾಗವನ್ನು ರವರ ಹೆಸರಿಗೆ ದಿನಾಂಕ: 26-02-2011 ರಂದು ಹಂಗಾಮಿ ಹಕ್ಕುಪತ್ರವನ್ನು ನೀಡಲಾಗಿರುತ್ತದೆ. ಸದರಿ ಪ್ರದೇಶವು ಕೊಳಚೆ ನಿರ್ಮೂಲನಾ ಮಂಡಳಿಯ ವ್ಯಾಪ್ತಿಯಲ್ಲಿ ಇರುವ ಸಮಯದಲ್ಲಿ, ಈ ಪ್ರದೇಶದಲ್ಲಿ 918 ಫಲಾನುಭವಿಗಳು ಸುಮಾರು ವರ್ಷಗಳಿಂದ ವಾಸವಾಗಿರುವ ಪ್ರದೇಶವಾಗಿದ್ದು, ಹಾಗೂ ಪ್ರದೇಶವನ್ನು ನಗರ ಪಾಲಿಕೆಗೆ ಹಸ್ತಾಂತರವಾದ ನಂತರ ಸರ್ಕಾರದ ಆದೇಶದಂತೆ ಹಂಗಾಮಿ ಹಕ್ಕುಪತ್ರಗಳನ್ನು ನೀಡಲಾಗಿರುತ್ತದೆ.

ಈ ಕೊಳಚೆ ಪ್ರದೇಶವನ್ನು ಪಾಲಿಕೆಯ ವತಿಯಿಂದ ಅಭಿವೃದ್ಧಿಪಡಿಸುವ ಸಮಯದಲ್ಲಿ ಸ್ವತ್ತಿನ ಸಂಖ್ಯೆ: 247, ಕಂಠೀರವನಗರ 5ನೇ ಅಡ್ಡರಸ್ತೆಯಲ್ಲಿ ರಸ್ತೆಗೆ ಅಡ್ಡಲಾಗಿ ಕಟ್ಟಿರುವ ಕಟ್ಟಡವನ್ನು ತೆರವುಗೊಳಿಸಿ ರಸ್ತೆ ನಿರ್ಮಿಸಲಾಗಿರುತ್ತದೆ. ಆದ್ದುದರಿಂದ, ಅರ್ಜಿದಾರರಿಗೆ ಬದಲಿ ನಿವೇಶನವಾಗಿ ಅದೇ ಪ್ರದೇಶದ ಪಶುಗಳ ಆಸ್ಪತ್ರೆ ಪಶ್ಚಿಮ ದಿಕ್ಕಿನಲ್ಲಿರುವ 30x15 ಅಡಿಗಳ ಖಾಲಿ ನಿವೇಶನವಿದ್ದು, ಅರ್ಜಿದಾರರನು

ಸ್ಥಳಾಂತರಿಸಬಹುದೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮಿಪುರ ಉಪ ವಿಭಾಗ ತಮ್ಮ ವರದಿಯಲ್ಲಿ ಸಲ್ಲಿಸಿರುತ್ತಾರೆ.

ಆದುದರಿಂದ, ಸದರಿ ಅರ್ಜಿದಾರರಿಗೆ ನೀಡಲಾಗಿರುವ ಹಂಗಾಮಿ ಹಕ್ಕುಪತ್ರವನ್ನು ಹಿಂದಕ್ಕೆ ಪಡೆದು ಅದೇ ಪ್ರದೇಶದಲ್ಲಿರುವ ದನಗಳ ಆಸ್ಪತ್ರೆಯ ಪಶ್ಚಿಮ ದಿಕ್ಕಿನಲ್ಲಿ ಖಾಲಿ ಇರುವ ಜಾಗವನ್ನು ಬದಲಿ ನಿವೇಶನವನ್ನಾಗಿ ಹಂಚಿಕೆ ಮಾಡಬಹುದೆಂದು ವಲಯಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ.

ಸದರಿ ಸ್ವತ್ತು ಕೊಳಚೆ ನಿರ್ಮೂಲನಾ ಮಂಡಳಿಯಿಂದ ಹಸ್ತಾಂತರವಾಗಿರುವ ಮುಂಚೆಯೇ ಮನೆಯನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆ ಹಾಗೂ ನಿವೇಶನವನ್ನು ಬದಲಿಸಿ ನೀಡುವ ನಿವೇಶನವು ಕೊಳಚೆ ನಿರ್ಮೂಲನಾ ಮಂಡಳಿಯಲ್ಲಿ ಉಳಿಸಿಕೊಂಡಿರುವ ಜಾಗವಾಗಿರುತ್ತದೆ ಹಾಗೂ ಸದರಿ ಸ್ವತ್ತಿನ ಪ್ರದೇಶವು ಉದ್ಯಾನವನ ಮತ್ತು ಆಟದ ಮೈದಾನಕ್ಕೆ ಉಳಿಸಿಕೊಂಡಿರುವುದು ಕಂಡು ಬಂದಿರುವುದಿಲ್ಲ ಎಂದು ವರದಿಯಲ್ಲಿ ತಿಳಿಸಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಸದರಿ ಅರ್ಜಿದಾರರಿಗೆ ನಗರ ಪಾಲಿಕೆಯ ಜಾಗವನ್ನು ಬದಲಿ ಜಾಗವನ್ನಾಗಿ ನೀಡುವ ಸಂಬಂಧ ಸೂಕ್ತ ತೀರ್ಮಾನ ಕೈಗೊಳ್ಳಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 24-01-2014ರ ಟಿಪ್ಪಣಿ

**ನಿರ್ಣಯ:**

**ಆಯುಕ್ತರ ದಿ 24-01-14ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ ಸದರಿ ಅರ್ಜಿದಾರರಿಗೆ ಬದಲಿ ಜಾಗವನ್ನು ನೀಡಲು ಸಮಿತಿಯು ತೀರ್ಮಾನಿಸಿತು.**

**ವಿಷಯದ ಸಂಖ್ಯೆ: ನಯೋಅಸ್ಥಾಸ/34/2013-14**

ಮಾನ್ಯ ಆಯುಕ್ತರ ದಿ: 24-01-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ನಂ:65, ಕುವೆಂಪು ರಸ್ತೆಯಲ್ಲಿನ ಎಚ್.ಕಾಲೋನಿ ಬಳಿ ಇರುವ 10X20 ಅಡಿಗಳ ಜಾಗವನ್ನು ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಕನ್ನಡ ಮಾಧ್ಯಮದ ನಿರುದ್ಯೋಗಿ ಅಭ್ಯರ್ಥಿಗಳಿಗೆ ಹಾಗೂ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಮತ್ತು ಅಂಗವಿಕಲರಿಗೆ ಉಚಿತವಾಗಿ ಗಣಕ ತರಬೇತಿ ಕೇಂದ್ರ ಆರಂಭಿಸಲು ದಿ:30-10-2006ರ ಪಾಲಿಕೆ ಸಭೆಯ ನಿರ್ಣಯದಂತೆ ದಿನಾಂಕ: 28-02-2007 ರಿಂದ 27-05-2010ರ ವರೆಗೆ ಮಾಸಿಕ ರೂ. 4900/-ಗಳಂತೆ 3 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲಾಗಿದ್ದು, ಈ ಅವಧಿಗೆ ನಿಗದಿಪಡಿಸಿರುವ ಗುತ್ತಿಗೆ ಹಣವನ್ನು ಪಾಲಿಕೆಗೆ ಸಂಪೂರ್ಣವಾಗಿ ಸಂದಾಯ ಮಾಡಿರುತ್ತಾರೆ.

ತದನಂತರ, ದಿ:28-02-2010 ರಿಂದ 27-10-2015ರ ವರೆಗೆ 5 ವರ್ಷಗಳ ಅವಧಿಗೆ ವಿಷಯ ಸಂಖ್ಯೆ: 10-(281)/10-11 ದಿ: 29-03-2011 ರಂದು ಬಿಬಿಎಂಪಿ ಸಭೆಯ ನಿರ್ಣಯದಲ್ಲಿ ಮಾಸಿಕ 5500/- ಗಳಂತೆ ಗುತ್ತಿಗೆ ಹಣ ನಿಗದಿಪಡಿಸಿ ತೀರ್ಮಾನಿಸಿರುತ್ತದೆ. ಅದರಂತೆ ಗುತ್ತಿಗೆ ಕರಾರು ಪತ್ರವನ್ನು

ನೊಂದಾಯಿಸಿ ನಿಯಮದಂತೆ ಕ್ರಮವಹಿಸಲು ಕಡತವನ್ನು ದಿ: 28-04-2011ರಂದು ಅಪರ ಆಯುಕ್ತರು (ಪಶ್ಚಿಮ) ರವರಿಗೆ ಕಳುಹಿಸಲಾಗಿರುತ್ತದೆ.

ಆದರೆ, ಗುತ್ತಿಗೆದಾರರು ಗುತ್ತಿಗೆ ಕರಾರು ಪತ್ರವನ್ನು ನೊಂದಾಯಿಸಿಕೊಳ್ಳದೇ ಅಧ್ಯಕ್ಷರು, ಲೆಕ್ಕ ಪತ್ರ ಸ್ಥಾಯಿ ಸಮಿತಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಮಾನ್ಯ ಆಯುಕ್ತರಿಗೆ ಪೂಜ್ಯ ಮಹಾಪೌರರಿಗೆ ಹಾಗೂ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮತ್ತು ಸಾರಿಗೆ ಮತ್ತು ಜಿಲ್ಲಾ ಉಸ್ತುವಾರಿ ಬೆಂಗಳೂರು ಜಿಲ್ಲಾ ಸಚಿವರಿಗೆ ಮನವಿ ಸಲ್ಲಿಸಿ ಬೆಂಗಳೂರು ಮಹಾನಗರದಲ್ಲಿ ಕನ್ನಡ ಮಾದ್ಯಮದಲ್ಲಿ ಅಭ್ಯಾಸ ಮಾಡಿ ನಿರುದ್ಯೋಗಿಯಾಗಿರುವ ಅಭ್ಯರ್ಥಿಗಳಿಗೆ ಔದ್ಯೋಗಿಕ ಉದ್ಯೋಗ ಅವಲಂಬಿತ ಕಂಪ್ಯೂಟರ್ ತಂತ್ರಜ್ಞಾನವನ್ನು ಕನ್ನಡ ತಂತ್ರಾಂಶದಲ್ಲಿ ಹಾಗೂ ಆಂಗ್ಲದಲ್ಲಿ ಉಚಿತವಾಗಿ ಕನ್ನಡ ಗಣಕ ಯಂತ್ರದ ತರಬೇತಿ ನೀಡುತ್ತಿರುವುದಾಗಿ ಹಾಲಿ ನಿಗದಿಪಡಿಸಿರುವ ಮಾಸಿಕ 5500/- ರೂಗಳ ಜಾಸ್ತಿಯಾಗಿದ್ದು, ವಿಶೇಷವಾಗಿ ಕನ್ನಡ ಮಾದ್ಯಮದವರಿಗೆ ಉಚಿತವಾಗಿ ತರಬೇತಿ ನೀಡುತ್ತಿರುವುದರಿಂದ ಬಾಡಿಗೆ ಮೊತ್ತವನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ, ಪುನರ್ ಪರಿಶೀಲಿಸಲು ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಮುಂದೆ ಮಂಡಿಸುವಂತೆ ಕೋರಿರುತ್ತಾರೆ. ಈ ಬಗ್ಗೆ ಮಾನ್ಯ ಆಯುಕ್ತರು ಕಂಡಿಕೆ (140) ರಲ್ಲಿ ಈ ಸ್ವತ್ತಿನ ಗುತ್ತಿಗೆ ಅವಧಿಯು ಫೆಬ್ರವರಿ-2015ರ ವರೆವಿಗೂ ಇರುವ ಪ್ರಯುಕ್ತ ಈ ಹಂತದಲ್ಲಿ ಮನವಿಯನ್ನು ಪರಿಶೀಲಿಸುವ ಅಗತ್ಯವಿರುವುದಿಲ್ಲವೆಂದು ಅಭಿಪ್ರಾಯಿಸಿ ಕಡತವನ್ನು ಜಂಟಿ ಆಯುಕ್ತರು (ಪಶ್ಚಿಮ)ರವರಿಗೆ ಹಿಂತಿರುಗಿಸಲಾಗಿರುತ್ತದೆ.

ನಂತರ, ಅರ್ಜಿದಾರರು ಪುನಃ ಪೂಜ್ಯ ಮಹಾಪೌರರಿಗೆ ಹಾಗೂ ಸಾರಿಗೆ ಮತ್ತು ಜಿಲ್ಲಾ ಉಸ್ತುವಾರಿ, ಬೆಂಗಳೂರು ಸಚಿವರಿಗೆ ಮನವಿ ಸಲ್ಲಿಸಿ 5 ವರ್ಷದ ಗುತ್ತಿಗೆ ಅವಧಿಯನ್ನು 30 ವರ್ಷಗಳ ವರೆಗೆ ನವೀಕರಿಸಲು ಹಾಗೂ ಹಾಲಿ ನಿಗದಿಪಡಿಸಿರುವ ಗುತ್ತಿಗೆ ಮೊತ್ತ ರೂ.5500/- ಜಾಸ್ತಿಯಾಗಿದ್ದು, ವಿಶೇಷ ಪ್ರಕರಣವೆಂದು ಪರಿಗಣಿಸಿ, ಉಚಿತವಾಗಿ ಅಥವಾ ವಿಶೇಷ ರಿಯಾಯತಿ ದರದಲ್ಲಿ ನೀಡಲು ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಕಡತದ ಕಂಡಿಕೆ (170) ರಲ್ಲಿ ಮಾನ್ಯ ಆಯುಕ್ತರು ಸಂಸ್ಥೆಯವರು ದಿ: 29-03-2011 ರಂದು ಮನವಿ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದಂತೆ ಮಾಸಿಕ ರೂ. 5500/- ಗಳನ್ನು ಇದುವರೆವಿಗೂ ಪಾವತಿಸಿರುವುದಿಲ್ಲ ಮತ್ತು ಗುತ್ತಿಗೆ ಕರಾರು ಪತ್ರವನ್ನು ಮಾಡಿಕೊಂಡಿರುವುದಿಲ್ಲ ಹಾಗೂ ಗುತ್ತಿಗೆ ಮೊತ್ತ ಜಾಸ್ತಿಯಾಗಿದ್ದಲ್ಲಿ, ಸದರಿ ಸಂಸ್ಥೆಯವರು ಅಪೀಲು ಕಮಿಟಿಗೆ ಮೇಲ್ಮನವಿಯನ್ನು ಸಹ ಸಲ್ಲಿಸಿರುವುದಿಲ್ಲವಾದ್ದರಿಂದ, ಹಾಗೂ ಪಾಲಿಕೆಯ ದಿ: 29-03-2011ರ ತೀರ್ಮಾನಕ್ಕೆ ವಿರುದ್ದವಾಗಿ ಗುತ್ತಿಗೆ ಅವಧಿ ಚಾಲ್ತಿಯಲ್ಲಿರುವಾಗಲೇ 30 ವರ್ಷದ ಅವಧಿಗೆ ಗುತ್ತಿಗೆ ನೀಡಲು ಬೇಡಿಕೆ ಸಲ್ಲಿಸಿರುವುದರಿಂದ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅರ್ಜಿದಾರರು ಪುನಃ ಅಧ್ಯಕ್ಷರು, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ರವರ ದಿ: 21-11-2013ರ ಹಾಗೂ ಮಾನ್ಯ ಸಾರಿಗೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ದಿ: 12-09-2013ರ ಪತ್ರದ ಮೇರೆಗೆ ಜಂಟಿ ಆಯುಕ್ತರು (ಪಶ್ಚಿಮ) ರವರು ಪುನಃ ಕಡತ ಮಂಡಿಸಿರುತ್ತಾರೆ.

ಪ್ರಸ್ತುತ ಜಾಗದ ವಿಸ್ತೀರ್ಣವು 20X10=200 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 12-08-2013ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ. 8400/- ಗಳಿರುತ್ತದೆ ಇದಕ್ಕೆ

ಶೇ 40% ರಷ್ಟು ಹೆಚ್ಚಿಸಿದಾಗ 11760/- ಗಳಾಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ 11760X200=2,35,20,00/- ರೂ ಒಟ್ಟು ಮೊತ್ತಗಳಾಗುತ್ತದೆ. ಇದರಲ್ಲಿ ಶೇ 10% ರಷ್ಟು ಅಂದರೆ, 2,35,200/- ರೂಗಳು ವಾರ್ಷಿಕ ಮೊತ್ತವಾಗುತ್ತದೆ. ಮಾಸಿಕ ರೂ. 19,600/- ಗಳಾಗುತ್ತದೆ.

ಈ ಮೇಲಿನ ಅಂಶಗಳನ್ನು ಅವಗಾಹನೆಗೆ ಸಲ್ಲಿಸುತ್ತಾ, ಸದರಿ ಸಂಸ್ಥೆಯವರಿಗೆ ನೀಡುವ ಗುತ್ತಿಗೆ ಅವಧಿಯನ್ನು 30 ವರ್ಷಗಳ ಅವಧಿಗೆ ನವೀಕರಿಸಲು ಹಾಗೂ ಮಾಸಿಕ ಗುತ್ತಿಗೆ ಮೊತ್ತವನ್ನು ಉಚಿತವಾಗಿ ಅಥವಾ ವಿಶೇಷ ರಿಯಾಯಿತಿಯಲ್ಲಿ ಪರಿಗಣಿಸುವ ಬಗ್ಗೆ ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 24-01-2014ರ ಟಿಪ್ಪಣಿ

**ನಿರ್ಣಯ:**

**ಮಾನ್ಯ ಆಯುಕ್ತರ ದಿ: 24-01-2014ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ, ಸದರಿ ಸಂಸ್ಥೆಯವರಿಗೆ 30 ವರ್ಷಗಳಿಗೆ ಗುತ್ತಿಗೆ ಅವಧಿಯನ್ನು ನವೀಕರಿಸಿ, ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸಮಿತಿಯ ಸಭೆಯಲ್ಲಿ ತಿರ್ಮಾನಿಸಲಾಯಿತು.**

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

**ಅಧ್ಯಕ್ಷರು,**
**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.ಎಸ್.ಪಕ್ಷದ ನಾಯಕರು, ಸದಸ್ಯರು ರವರ ಮಾಹಿತಿಗಾಗಿ ಕಳುಹಿಸಿದೆ.
4. ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಸಮಿತಿಯ ಸದಸ್ಯರು ರವರ ಮಾಹಿತಿಗಾಗಿ ಕಳುಹಿಸಿದೆ.
6. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
7. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
8. ಅಪರ ಆಯುಕ್ತರು (ಆಸ್ತಿಗಳು) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿರವರ ಅವಗಾಹನೆಗೆ ಸಲ್ಲಿಸಿದೆ.
10. ಉಪ ಆಯುಕ್ತರು (ಆಸ್ತಿಗಳು/ಕಂದಾಯ/ಜಾಹಿರಾತು/ಭೂಸ್ವಾಧಿನ) ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಾನೂನು ಕೋಶದ ಮುಖ್ಯಸ್ಥರು ರವರ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕರಡು ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮಾನ್ಯ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 24-02-2014 ರಂದು ಬೆಳಿಗ್ಗೆ 10-30 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಂಪೇಗೌಡ ಪೌರ ಸಭಾಂಗಣದ ಅಧ್ಯಕ್ಷರ ಕೊಠಡಿ ಸಂಖ್ಯೆ: 205 ರಲ್ಲಿ ಸಮಿತಿಗೆ ಮಂಡಿಸಲಾಗಿರುವ ಟಿಪ್ಪಣಿ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವ ಸಂಬಂಧ ನಡೆದ ಸಭೆಯ ನಡವಳಿಗಳು.

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| 1. **ಶ್ರೀ. ಕೆ. ಉಮೇಶ್ ಶೆಟ್ಟಿ** : ಅಧ್ಯಕ್ಷರು<br>2. ಶ್ರೀ ಎಲ್.ರಮೇಶ್ : ಸದಸ್ಯರು<br>3. ಶ್ರೀ. ಬಿ.ಆರ್. ಚಂದ್ರಶೇಖರ್ : ಸದಸ್ಯರು<br>4. ಶ್ರೀಮತಿ ಸುಮಿತ್ರಾ. ವಿ : ಸದಸ್ಯರು<br>5. ಶ್ರೀ. ಎನ್. ವೀರಣ್ಣ : ಸದಸ್ಯರು<br>6. ಶ್ರೀಮತಿ ಫರೀಧ : ಸದಸ್ಯರು<br>7. ಶ್ರೀಮತಿ ಟಿ.ಎ.ಗಾಯತ್ರಿ : ಸದಸ್ಯರು | 1. ಕೌನ್ಸಿಲ್ ಕಾರ್ಯದರ್ಶಿಗಳು<br>2. ಸಹಾಯಕ ಆಯುಕ್ತರು (ಆಸ್ತಿಗಳು)<br>3. ಸಹಾಯಕ ಕಂದಾಯ ಅಧಿಕಾರಿಗಳು/ ಪುಲಕೇಶಿನಗರ/ |

ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು.

ಮಾನ್ಯ ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಸಮಿತಿ ಸದಸ್ಯರಿಗೆ ಹಾಗೂ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ ವರ್ಗದವರಿಗೆ ಸ್ವಾಗತ ಕೋರಿದರು.

**ವಿಷಯದ ಸಂಖ್ಯೆ: ನಯೋಅಸ್ಥಾಸ/95/2012-13**

ಮಾನ್ಯ ಆಯುಕ್ತರ ದಿ: 16-01-2013ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಸಹ ಕಂದಾಯ ಅಧಿಕಾರಿ (ಪುಲಿಕೇಶಿನಗರ) ಉಪ ವಿಭಾಗಕ್ಕೆ ಬರುವ ವಾರ್ಡ್-61 ಎಸ್.ಕೆ. ಗಾರ್ಡನ್‌ನಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸ್ವತ್ತಿನ ಅಳತೆ 100X200 ಅಡಿಗಳ ನಿವೇಶನವನ್ನು 30 ವರ್ಷಗಳಿಗೆ ದಿನಾಂಕ:02-10-1975 ರಿಂದ 01-10-2005ರ ವರೆವಿಗೆ ಅಧ್ಯಕ್ಷರು ಕುಂಬಾರ ಕರಕುಶಲ ಕಾರ್ಮಿಕರ ಸಂಘ ನ್ಯೂ ಪಾಟರಿ ಟೌನ್, ವಾರ್ಡ್-61 ಬೆಂಗಳೂರು-05 ರವರಿಗೆ ಸರ್ಕಾರದ ಆದೇಶ ಸಂಖ್ಯೆ:ಹೆಚ್.ಎಂ.ಎ/332/ಎಂ.ಎನ್.ಜಿ/75 ದಿನಾಂಕ: 30-08-1975ರಲ್ಲಿ ವಾರ್ಷಿಕ ರೂ.500/-ಗಳ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ದಿನಾಂಕ:01-10-2005

ರಂದು ಗುತ್ತಿಗೆಗೆ ನೀಡಿರುವ ಅವಧಿಯು ಪೂರ್ಣಗೊಂಡಿರುವುದರಿಂದ ನಗರ ಪಾಲಿಕೆ ಸ್ವತ್ತನ್ನು ನಗರ ಪಾಲಿಕೆಗೆ ಹಿಂದಿರುಗಿಸಲು ನೋಟೀಸ್ ಜಾರಿ ಮಾಡಲಾಗಿರುತ್ತದೆ.

ದಿನಾಂಕ:02-08-2010 ರಂದು ಸದರಿ ಸಂಘದವರು ಗುತ್ತಿಗೆ ಅವಧಿಯನ್ನು ನವೀಕರಿಸಲು ಶೇ 50% ರಷ್ಟು ರಿಯಾಯಿತಿ ನೀಡಿ ಕ್ರಯಕ್ಕೆ ಮಂಜೂರು ಮಾಡಲು ಸರ್ಕಾರವನ್ನು ಕೋರಿದ್ದು, ಸರ್ಕಾರದ ಆದೇಶ ಸಂಖ್ಯೆ:ನಅಇ15/ಎಂಎನ್‌ಜಿ/2006 ದಿನಾಂಕ:06-05-2006 ರಂತೆ ಸದರಿಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

ಅದರಂತೆ, ಗುತ್ತಿಗೆಗೆ ನೀಡಿರುವ ನಗರ ಪಾಲಿಕೆ ಸ್ವತ್ತನ್ನು ಪಾಲಿಕೆ ವಶಕ್ಕೆ ಪಡೆಯಲು ಕೆ.ಪಿ.ಪಿ.ಕಾಯ್ದೆ 4 ರಂತೆ ಅಧ್ಯಕ್ಷರು ಕುಂಬಾರ ಕರಕುಶಲ ಸಂಘಕ್ಕೆ ನೋಟೀಸ್ ಜಾರಿಗೊಳಿಸಿದ್ದು, ಪುನ: ದಿ:17-09-2010 ರಂದು ಕೆ.ಪಿ.ಪಿ.ಕಾಯ್ದೆ 5 ಫಾರಂ 'ಬಿ' ರ ಪ್ರಕಾರ ನಗರ ಪಾಲಿಕೆ ಸ್ವತ್ತನ್ನು ಹಿಂದಿರುಗಿಸಲು ನೋಟೀಸ್ ಜಾರಿಮಾಡಲಾಗಿರುತ್ತದೆ. ಈ ಮಧ್ಯೆ ಶ್ರೀ.ಕಣ್ಣನ್ ಮತ್ತು ಶ್ರೀ. ವೆಂಕಟರಾಮಯ್ಯ ಶೆಟ್ಟಿ ಎಂಬುವವರು ಸದರಿಯವರಿಗೆ ನಗರ ಪಾಲಿಕೆ ವತಿಯಿಂದ ನೀಡಿರುವ ಗುತ್ತಿಗೆ ಅವಧಿಯು ಮುಗಿದಿರುವುದರಿಂದ ಸ್ವತ್ತನ್ನು ಹಿಂಪಡೆಯಲು ದೂರು ಅರ್ಜಿ ಸಹ ಸಲ್ಲಿಸಿರುತ್ತಾರೆ. ಈ ಮಧ್ಯೆ ಸಂಘದವರು ಮಾನ್ಯ ವಸತಿ ಹಾಗೂ ವಾರ್ತಾ ಮತ್ತು ಮಾಹಿತಿ ತಂತ್ರಜ್ಞಾನ ಸಚಿವರು ಶಿಫಾರಸ್ಸು ಪತ್ರವನ್ನು ನೀಡಿ, ಸದರಿ ಸಂಘಕ್ಕೆ ಮುಂದಿನ 50 ವರ್ಷಗಳ ಅವಧಿಗೆ ಗುತ್ತಿಗೆ ಅವಧಿ ನವೀಕರಿಸಲು ಕೋರಿರುತ್ತಾರೆ.

ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: 19-2010-11, ಬೆಂಗಳೂರು ದಿನಾಂಕ:21-09-2011 ರಂತೆ, ಪ್ರಸ್ತುತ ಸ್ವತ್ತಿನ ಮಾರುಕಟ್ಟೆ ದರವು ವಸತಿಗೆ ಚದರ ಅಡಿ 1ಕ್ಕೆ ರೂ.3500/- ಗಳಿದ್ದು, ಸ್ವತ್ತಿನ ವಿಸ್ತೀರ್ಣ 100X200=20,000 ಚದರ ಅಡಿಗಳಿದ್ದು, ಸ್ವತ್ತಿನ ಮೌಲ್ಯ ರೂ.7,00,00,000/-ಗಳಾಗುತ್ತದೆ. ಮಾರುಕಟ್ಟೆ ದರದ ಶೇ 10% ರಂತೆ ಪರಿಗಣಿಸಿದಲ್ಲಿ ವಾರ್ಷಿಕ 70,00,000/-ರೂಗಳಾಗುತ್ತದೆ. ಮಾಸಿಕ ರೂ.5,83,400/-ಗಳಾಗುತ್ತದೆ. ಆದ್ದರಿಂದ ಗುತ್ತಿಗೆ ಅವಧಿ ಮುಗಿದ ದಿನಾಂಕದಿಂದ ಕರಾರು ನೊಂದಾಯಿಸುವ ದಿನಾಂಕದವರೆಗೆ ಹಳೆಯ ದರದಂತೆ, ನಂತರದ ವರ್ಷಗಳಿಗೆ ಪ್ರಸಕ್ತ ಮಾರುಕಟ್ಟೆ ದರದಂತೆ ಗುತ್ತಿಗೆ ಅವಧಿಯನ್ನು ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ನಿರ್ಣಯದೊಂದಿಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನಿಸಬೇಕಾಗಿದ್ದು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆ ಮುಂದೆ ಟಿಪ್ಪಣಿ ಮಂಡಿಸಲಾಗಿತ್ತು.

ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ಸ್ಥಳ ಪರಿಶೀಲಿಸಿ ದಿನಾಂಕ:20-06-2011ರ ಸಭೆ ನಡುವಳಿಯಲ್ಲಿ ಸದರಿ ಸ್ಥಳದಲ್ಲಿ ಹಲವಾರು ಕುಟುಂಬಗಳು ವಾಸವಿರುವುದು ಕಂಡು ಬಂದಿರುತ್ತದೆ. ಸದರಿ ಸ್ವತ್ತನ್ನು ದುರುಪಯೋಗಪಡಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿರುವ ಹಿನ್ನೆಲೆಯಲ್ಲಿ ಸದರಿ ಸ್ಥಳದಲ್ಲಿ ವಾಸವಿರುವ ಕುಟುಂಬಗಳು ಕುಂಬಾರ ಕರ ಕುಶಲ ಕೈಗಾರಿಕಾ ಸಹಾಕರ ಸಂಘ ಸದಸ್ಯರುಗಳೇ ಹಾಗೂ ಅವರುಗಳು ತಮ್ಮ ಕುಲ ಕಸುಬನ್ನು ಮಾಡುತ್ತಿದ್ದಾರೆಯೇ ಮತ್ತು ಸ್ವತ್ತನ್ನು ದುರುಪಯೋಗ ಪಡಿಸಿಕೊಳ್ಳುತ್ತಿರುವುದಾಗಿ ಬಂದಿರುವ ದೂರುಗಳು ನ್ಯಾಯ ಸಮ್ಮತವಾಗಿವೆಯೇ ಎಂಬುದನ್ನು ಪರಿಶೀಲಿಸಿ ಮರು ಮಂಡಿಸಲು ಕಡತವನ್ನು ಹಿಂದಿರುಗಿಸಿರುತ್ತದೆ.

ಈ ಬಗ್ಗೆ ವಲಯಾಧಿಕಾರಿಗಳು ದಿನಾಂಕ: 11-03-2011 ರಂದು ಉಪ ಆಯುಕ್ತರು (ಆಸ್ತಿಗಳು) ರವರು ಸ್ಥಳ ಪರಿಶೀಲಿಸಿ ನೀಡಿರುವ ವರದಿಯನ್ನು ಮತ್ತೊಮ್ಮೆ ಪ್ರಸ್ತಾಪಿಸಿ ಮುಂದಿನ ನಿರ್ಣಯಕ್ಕಾಗಿ ಸ್ಥಾಯಿ ಸಮಿತಿಗೆ ಸಲ್ಲಿಸಲು ಕಳುಹಿಸಿರುತ್ತಾರೆ. ಸ್ಥಳ ಪರಿಶೀಲನಾ ವರದಿಯನ್ನು ಟಿಪ್ಪಣಿಯೊಂದಿಗೆ ಲಗತ್ತಿಸಿ ಕಳುಹಿಸಿದೆ.

ಸದರಿ ಸಂಘಕ್ಕೆ ನೀಡಿರುವ ಗುತ್ತಿಗೆ ಅವಧಿಯು ದಿ:01-10-2005 ರಂದು ಮುಕ್ತಾಯಗೊಂಡಿದ್ದು, 5 ವರ್ಷಗಳಿಗೆ ಗುತ್ತಿಗೆ ನವೀಕರಿಸಿದಲ್ಲಿ, 2011 ಕ್ಕೆ ಮುಕ್ತಾಯವಾಗುತ್ತದೆ. ಆದುದರಿಂದ, ಸದರಿ ಗುತ್ತಿಗೆಯನ್ನು 30 ವರ್ಷಗಳಿಗೆ ನವೀಕರಿಸಲು ಸೂಕ್ತವೆಂದು ಅಭಿಪ್ರಾಯಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಸದರಿ ಸಂಘಕ್ಕೆ ಗುತ್ತಿಗೆ ನವೀಕರಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾಪಿಸಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 16-01-2013ರ ಟಿಪ್ಪಣಿ.

**ನಿರ್ಣಯ:**

**ಆಯುಕ್ತರ ದಿನಾಂಕ: 16-01-2013ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಈಗಾಗಲೇ ಟಿಪ್ಪಣಿಯಲ್ಲಿ ಮಂಡಿಸಿರುವಂತೆ ನಗರಪಾಲಿಕೆಯಿಂದ ನೀಡಲಾದ ಸ್ವತ್ತಿನ ಗುತ್ತಿಗೆ ಕರಾರಿನ ಹಲವು ಅಂಶಗಳು ಸ್ಪಷ್ಟವಾಗಿ ಉಲ್ಲಂಘನೆಯಾಗಿರುವುದಾಗಿ ಉಪ ಆಯುಕ್ತರು ಆಸ್ತಿಗಳು ರವರು ಸ್ಥಳ ಪರಿಶೀಲಿಸಿ ವರದಿ ಮಾಡಿರುತ್ತಾರೆ ಹಾಗೂ ಸ್ಥಳೀಯ ಪಾಲಿಕೆ ಸದಸ್ಯರು ಪತ್ರವನ್ನು ನೀಡಿ ವಿರೋಧ ವ್ಯಕ್ತಪಡಿಸಿರುವುದರಿಂದ ಕರಾರೀನ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ಆಯುಕ್ತರು ಸ್ಥಳವನ್ನು ಪರಿಶೀಲಿಸಿ ಗುತ್ತಿಗೆ ಕರಾರಿನ ಅಂಶಗಳನ್ನು ಪಾಲಿಸಿ ನಂತರ ತಿರ್ಮಾನಕ್ಕೆ ಸ್ಥಾಯಿ ಸಮಿತಿಯ ಮುಂದೆ ಕಡತವನ್ನು ಮರು ಮಂಡಿಸಲು ಸಮಿತಿ ತಿರ್ಮಾನಿಸಿತು.**

**ವಿಷಯದ ಸಂಖ್ಯೆ: ನಯೋಅಸ್ಥಾಸ/31/2013-14**

ಮಾನ್ಯ ಆಯುಕ್ತರ ದಿ: 07-01-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮ ನಿಯಮಿತ ರವರು ವಾರ್ಡ್ ಸಂಖ್ಯೆ: 90 ರಲ್ಲಿನ ಹಲಸೂರು ಕೆರೆಯಲ್ಲಿ ದೋಣಿ ವಿಹಾರದ ಶುಲ್ಕ ವಸೂಲಾತಿ ಗುತ್ತಿಗೆಯನ್ನು ನವೀಕರಿಸಲು ಕೋರಿರುತ್ತಾರೆ. ಹಲಸೂರಿನ ಕೆರೆಯಲ್ಲಿ ದೋಣಿ ವಿಹಾರದ ಶುಲ್ಕ ವಸೂಲಾತಿಯ ಹಕ್ಕನ್ನು ಗುತ್ತಿಗೆ ಆಧಾರದ ಮೇಲೆ ದಿನಾಂಕ: 01-07-2007 ರಿಂದ 30-06-2008 ರವರೆಗೆ ವಾರ್ಷಿಕ ಗುತ್ತಿಗೆ ರೂ. 1,50,000/- ಗಳನ್ನು ನಿಗಧಿಪಡಿಸಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮ ನಿಯಮಿತ ರವರಿಗೆ ಗುತ್ತಿಗೆಗೆ ನೀಡಲಾಗಿರುತ್ತದೆ. ಗುತ್ತಿಗೆ ಅವಧಿ ಮುಗಿದ ನಂತರವು ಸಹ ಸದರಿ ಸಂಸ್ಥೆಯವರಿಗೆ ಪತ್ರ ಬರೆದು ಗುತ್ತಿಗೆಯನ್ನು ನವೀಕರಿಸಿಕೊಳ್ಳುವಂತೆ ಸೂಚಿಸಲಾಗಿ, ದಿನಾಂಕ: 13-09-2010ರಂದು ಮನವಿ ಪತ್ರವನ್ನು ಸಲ್ಲಿಸಿ ಗುತ್ತಿಗೆ ಅವಧಿಯನ್ನು 10 ವರ್ಷಗಳ ಅವಧಿಗೆ ಮುಂದುವರಿಸಲು ಕೋರಿರುತ್ತಾರೆ.

ದೋಣಿ ವಿಹಾರದ ಗುತ್ತಿಗೆಯನ್ನು ದಿನಾಂಕ: 01-08-2008 ರಿಂದ 5 ವರ್ಷಗಳಿಗೆ ಗುತ್ತಿಗೆ ಮೊತ್ತ ರೂ. 2,00,000/- ರಂತೆ ನಿಗಧಿಪಡಿಸಿ ಗುತ್ತಿಗೆಯನ್ನು ನವೀಕರಿಸಲು ನಗರ ಯೋಜನೆ ಮತ್ತು ಅಭಿವೃದ್ದಿ

ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಲಾಗಿ ಸ್ಥಾಯಿ ಸಮಿತಿಯ ದಿನಾಂಕ: 25–01–2011 ರಂದು ವಿಷಯದ ಸಂಖ್ಯೆ:39/10–11ರಲ್ಲಿ ಸದರಿಯವರಿಗೆ 5 ವರ್ಷಗಳ ಗುತ್ತಿಗೆಯನ್ನು ನವೀಕರಿಸಲು ಅನುಮತಿ ನೀಡಲಾಗಿರುತ್ತದೆ, ನಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಡವಳಿಗಳ ವಿಷಯದ ಸಂಖ್ಯೆ: 346/10–11 ದಿನಾಂಕ: 08–04–2011ರ ತೀರ್ಮಾನದ ಬಗ್ಗೆ ಪಾಲಿಕೆಯ ಸಭೆಯಲ್ಲಿ ವಿಷಯದ ಸಂಖ್ಯೆ: 20(31)11–12 ದಿನಾಂಕ: 31–05–2011ರಂದು ಸದರಿ ಸಂಸ್ಥೆಗೆ ನೀಡಿರುವ ಗುತ್ತಿಗೆ ಅವಧಿ ಮುಗಿದಿರುವುದರಿಂದ ದೋಣಿ ವಿಹಾರ ನಡೆಸಲು ಗುತ್ತಿಗೆಯನ್ನು ಹರಾಜು ಮುಖಾಂತರ ನೀಡಲು ತೀರ್ಮಾನಿಸಲಾಗಿರುತ್ತದೆ.

ಪಾಲಿಕೆಯ ತೀರ್ಮಾನದಂತೆ ಕಡತವನ್ನು ಮುಖ್ಯ ಅಭಿಯಂತರರು (ಕೆರೆಗಳು) ರವರಿಗೆ ಕಳುಹಿಸಿದ್ದು, ಇದುವರೆವಿಗೂ ದೋಣಿ ವಿಹಾರದ ಹರಾಜು ಪ್ರಕ್ರಿಯೆಯನ್ನು ನಡೆಸಿರುವುದಿಲ್ಲ. ಸದರಿ ಗುತ್ತಿಗೆ ಅವಧಿಯು ದಿನಾಂಕ: 31–08–2013ಕ್ಕೆ ಪೂರ್ಣಗೊಂಡಿದ್ದು, ಮೇಲ್ಕಂಡ ಸಂಸ್ಥೆಯವರೇ ದೋಣಿ ವಿಹಾರ ನಡೆಸಿ ಗುತ್ತಿಗೆ ಮೊತ್ತವನ್ನು ವಾರ್ಷಿಕ ರೂ. 2.00,000/– ಗಳಂತೆ 2012–13ನೇ ಸಾಲಿನವರೆವಿಗೆ ಪಾವತಿಸಿರುತ್ತಾರೆ.

ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ ರವರು ದಿನಾಂಕ: 25–04–2013 ಮತ್ತು 20–06–2013ರ ಪತ್ರದಲ್ಲಿ ಕಳೆದ 26 ವರ್ಷಗಳಿಂದ ದೋಣಿ ವಿಹಾರ ನಿರ್ವಹಿಸುತ್ತಿರುವುದಾಗಿ ಮತ್ತು ಈ ಉದ್ದೇಶಕ್ಕಾಗಿ ಯಾಂತ್ರಿಕ ದೋಣಿಗಳನ್ನು ಹಾಗೂ ಪೆಡಲ್ ಬೋಟ್‌ಗಳನ್ನು ಹೊಂದಿದ್ದು, ಪ್ರಯಾಣಿಕರ ಹಿತದೃಷ್ಟಿಯಿಂದ ನುರಿತ ಹಾಗೂ ಪರವಾನಗಿ ಹೊಂದಿರುವ ಚಾಲಕರನ್ನು ಸಹ ನೇಮಿಸಿಕೊಂಡಿರುವುದಾಗಿ ಪರವಾನಗಿಯನ್ನು ಮುಂದಿನ 5 ವರ್ಷಗಳಿಗೆ ಮುಂದುವರೆಸಬೇಕೆಂದು ಕೋರಿರುವ ಸಂಸ್ಥೆಯವರ ಮನವಿ ಬಗ್ಗೆ ಗುತ್ತಿಗೆ ಮೊತ್ತವನ್ನು ಪುನಃ ಹೆಚ್ಚಿಸಿ ಗುತ್ತಿಗೆಯನ್ನು ನವೀಕರಿಸಲು ಸೂಕ್ತ ತೀರ್ಮಾನ ಕೈಗೊಳ್ಳಲು ಮುಂದಿನ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 07–01–2014ರ ಟಿಪ್ಪಣಿ

**<u>ಸ್ಥಳ ತಪಾಸಣೆಗೆ ಮುಂದೂಡಲಾಗಿದೆ.</u>**

**<u>ವಿಷಯದ ಸಂಖ್ಯೆ: ನಯೋಅಸ್ಥಾಸ/35/2013–14</u>**

ಮಾನ್ಯ ಆಯುಕ್ತರ ದಿ: 06–02–2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಸತಿ ಗೃಹದ ಸಂಖ್ಯೆ, ಹಳೇ ಸವಾರ್ ಲೇನ್ ಶೇಷಾದ್ರಿಪುರಂ, ವಾರ್ಡ್ ನಂ:94 (27) ರಲ್ಲಿ ಇರುವ ನಗರ ಪಾಲಿಕೆಯ 4.0 ಮೀx12.30 ಮೀ ಸ್ವತ್ತನ್ನು ಶ್ರೀ ನಲ್ಲೂರು ವೆಂಕಟಯ್ಯ ರವರಿಗೆ ದಿ: 07–01–1978 ರಲ್ಲಿ ರವರ ಹೆಸರಿಗೆ ಹಂಚಿಕೆ ಮಾಡಲಾಗಿದ್ದು, ದಿನಾಂಕ: 31–03–1981 ರಂದು ನೊಂದಾವಣಿ ಶುಲ್ಕ ಪಾವತಿಸಿರುವುದು ಕಂಡು ಬರುತ್ತದೆ. ಸದರಿ ಅರ್ಜಿದಾರರಾದ ಶ್ರೀ. ನಲ್ಲೂರು ವೆಂಕಟರಾವ್ ರವರ ನಿಧನದ ನಂತರ ಅವರ ಮಗಳಾದ ಶ್ರೀಮತಿ. ರವಣಮ್ಮ ರವರ ಹೆಸರಿಗೆ ದಿ:22–08–2002ರಲ್ಲಿ ಕ್ರಯಪತ್ರವನ್ನು ನೊಂದಾಯಿಸಿಕೊಡಲಾಗಿದ್ದು,

ಸದರಿಯವರು ದಿ: 13-02-2010ರಂದು ಕ್ರಯಪತ್ರದ ಆಧಾರದ ಮೇಲೆ ಖಾತಾ ನೊಂದಾವಣೆ ಕೋರಿರುತ್ತಾರೆ. ಸದರಿ ಎರ್ರೋಡು ರವರು ಸಹ ಖಾತಾ ನೊಂದಾವಣೆಗಾಗಿ ಕೋರಿ ಪ್ರಶ್ನಿತ ಅರ್ಜಿಯೊಂದಿಗೆ ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಸದರಿ ನಲ್ಲೂರು ವೆಂಕಟಯ್ಯ ರವರ ವಂಶವೃಕ್ಷವನ್ನು ಸಕ್ಷಮ ಪ್ರಾಧಿಕಾರದಿಂದ ಪಡೆದು ಸಲ್ಲಿಸಿರುವುದಿಲ್ಲ.

ಈ ಖಾತಾ ನೊಂದಾವಣಿ ಗೊಂದಲ ನಿವಾರಣೆಗಾಗಿ ಕಾನೂನು ವಿಭಾಗದ ಅಭಿಪ್ರಾಯಕ್ಕಾಗಿ ಕೋರಿದ್ದು, ಸದರಿ ಕಾನೂನು ವಿಭಾಗದ ಅಭಿಪ್ರಾಯದಲ್ಲಿ ದಿ: 06-03-1991ರಲ್ಲಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ತೆಗೆದುಕೊಂಡಿರುವ ನಿರ್ಣಯವನ್ನು ಮರೆಮಾಚಿ ಪೂರಾ ಸ್ವತ್ತನ್ನು ಶ್ರೀಮತಿ. ರವಣಮ್ಮ ರವರಿಗೆ ಕ್ರಯಕ್ಕೆ ಪಡೆದಿರುವುದು ಸರಿಯಾದ ಕ್ರಮವಲ್ಲವೆಂದು ಹಾಗೂ ಸದರಿ ಸ್ವತ್ತನ್ನು ಅರ್ಧ ಭಾಗದ ಸ್ವತ್ತನ್ನು ಹಂಚಿಕೆ ಮಾಡುವ ಸಲುವಾಗಿ ಸ್ಥಾಯಿ ಸಮಿತಿಯ ನಿರ್ಣಯವನ್ನು ಖಚಿತಪಡಿಸಿಕೊಂಡು ಸಕ್ಷಮ ಪ್ರಾಧಿಕಾರದ ಹಂತದಲ್ಲಿ ಅರ್ಜಿದಾರರ ಮನವಿ ಪರಿಗಣಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತಪಡಿಸಿರುವುದು ಕಂಡು ಬರುತ್ತದೆ.

ಮುಂದುವರೆದಂತೆ ದಿ: 26-03-1991ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ತೀರ್ಮಾನದ ಪ್ರತಿಯನ್ನು ವಲಯಾಧಿಕಾರಿಗಳು ಪಡೆದು ಪರಿಶೀಲಿಸಿ, ಸದರಿ ಸಮಿತಿಯ ವಿಷಯ ಸಂಖ್ಯೆ:165ರಲ್ಲಿ ವಸತಿ ಗೃಹ ಸಂಖ್ಯೆ 72ರಲ್ಲಿ ಎರ್ರೋಡು ಮತ್ತು ಶ್ರೀಮತಿ. ರವರಣಮ್ಮ ಇಬ್ಬರು ವಾಸಮಾಡುತ್ತಿರುವುದರಿಂದ ಅರ್ಧ ಭಾಗವನ್ನು ಶ್ರೀಮತಿ ರವಣಮ್ಮ ರವರಿಗೂ ಇನ್ನೂಳಿದ ಅರ್ಧಭಾಗವನ್ನು ಶ್ರೀ. ಎರ್ರೋಡು ರವರಿಗೂ ಹಂಚಿಕೆ ಮಾಡಿಕೊಡುವ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿ: 30-01-1991ರ ಟಿಪ್ಪಣಿಯನ್ನು ಒಪ್ಪಿಗೆ ನೀಡಿ ತೀರ್ಮಾನ ತೆಗೆದುಕೊಡಿರುತ್ತದೆ ಹಾಗೂ ನಿರ್ಣಯವನ್ನು ಸರ್ಕಾರದಿಂದ ಅನುಮೋದಿಸಿಕೊಂಡಿರುವುದಿಲ್ಲ ಎಂದು ವರದಿಸಿರುತ್ತಾರೆ.

ಯೋಜನಾ ಸ್ಥಾಯಿ ಸಮಿತಿಯ ತೀರ್ಮಾನದಂತೆ ಅಂದಿನ ಉಪ ಕಂದಾಯ ಅಧಿಕಾರಿ ರವರು ದಿನಾಂಕ: 25-04-1991ರಂದು ಅರ್ಜಿದಾರರಿಗೆ ಹಿಂಬರಹ ನೀಡಿ ಪ್ರಸ್ತಾಪಿತ ಸ್ವತ್ತಿನ ದಕ್ಷಿಣಾರ್ಧ ಭಾಗ ಶ್ರೀಮತಿ ರವಣಮ್ಮರವರಿಗೂ ಉತ್ತರಾರ್ಧ ಭಾಗ ಶ್ರೀ ಎರ್ರೋಡು ರವರಿಗೆ ಹಂಚಿಕೆ ಮಾಡಿರುವುದರಿಂದ ತಲಾ ರೂ. 2749/- ಗಳನ್ನು ಪಾವತಿ ಮಾಡಿ 7 ದಿವಸದೊಳಗೆ ನೊಂದಾಯಿಸಿಕೊಳ್ಳಲು ಸೂಚಿಸಿರುತ್ತಾರೆ. ಆದರೆ, ಆ ನಿರ್ಣಯವನ್ನು ಸರ್ಕಾರದ ಅನುಮೋದನೆ ಸಿಕ್ಕಿರುವುದಿಲ್ಲ.

ಅದರಂತೆ, ದಿ: 25-04-1991 ರಂದು ಶ್ರೀ. ಎರ್ರೋಡು ರವರು ರೂ.2749/-ಗಳನ್ನು ಪಾವತಿಸಿರುವುದು ದಾಖಲೆಗಳಿಂದ ಕಂಡು ಬಂದಿದ್ದು, ಕ್ರಯಪತ್ರ ನೊಂದಾವಣಿಗೆ ದಿ:07-12-2010ರಲ್ಲಿ ಅರ್ಜಿ ಸಲ್ಲಿಸಿರುವುದು ಕಂಡು ಬರುತ್ತದೆ.

ಪ್ರಸೂತ ಜಾಗದ ವಿಸ್ತೀರ್ಣವು 26X14=364 ಚದರ ಅಡಿಗಳಾಗಿದ್ದು, ಈ ಪ್ರದೇಶದಲ್ಲಿ ದಿನಾಂಕ: 12–08–2013ರ ಸರ್ಕಾರದ ಮಾರ್ಗಸೂಚಿ ದರದಂತೆ ಚದರ ಅಡಿ ಒಂದಕ್ಕೆ ರೂ. 2400/– ಗಳಿದ್ದು, ವಸತಿಗೆ ಶೇ 30% ರಷ್ಟು ಸೇರಿಸಲಾಗಿ, 3120/–ಗಳಾಗುತ್ತದೆ. ಇದರಂತೆ ಲೆಕ್ಕಾಚಾರ ಮಾಡಲಾಗಿ, 3120X363=11,35,680/– ರೂ. ಒಟ್ಟು ಮೊತ್ತಗಳಾಗುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀಮತಿ ರವಣಮ್ಮ ರವರಿಗೆ ಆಗಿರುವ ಕ್ರಯಪತ್ರವನ್ನು ರದ್ದುಪಡಿಸಿ ದಿನಾಂಕ: 26–03–1991ರ ನಿರ್ಣಯದಂತೆ ಸದರಿ ಸ್ವತ್ತಿನ ಉತ್ತರಾರ್ಧ ಭಾಗದಲ್ಲಿ ವಾಸ ಮಾಡುತ್ತಿರುವ ಶ್ರೀ. ಎರ್ರೋಡುರವರ ಮಗನಾದ ಶ್ರೀ.ನಾಗೇಂದ್ರ ರವರಿಗೂ ದಕ್ಷಿಣಾರ್ಧ ಭಾಗವನ್ನು ಶ್ರೀಮತಿ ರವರಣಮ್ಮ ರವರಿಗೂ ಹಂಚಿಕೆ ಮಾಡುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 06–02–2014ರ ಟಿಪ್ಪಣಿ

**<u>ಮುಂದೂಡಲಾಗಿದೆ.</u>**

**<u>ವಿಷಯದ ಸಂಖ್ಯೆ: ನಯೋಅಸ್ಥಾಸ/36/2013–14</u>**

ಮಾನ್ಯ ಆಯುಕ್ತರ ದಿ: 22–02–2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ವಾರ್ಡ್ ಸಂಖ್ಯೆ : 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು **"ಸ್ವಾಮಿ ವಿವೇಕಾನಂದ ವೃತ್ತ"** ವೆಂದು ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 129 ಮಂದಿ, ವಿರೋಧವಾಗಿ 7 ಮಂದಿ ಸಹಿ ಮಾಡಿರುವುದು ಕಂಡು ಬಂದಿದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು

ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆಯಲ್ಲಿರುವ ಮುಖ್ಯ ವೃತ್ತವನ್ನು **"ಸ್ವಾಮಿ ವಿವೇಕಾನಂದ ವೃತ್ತ"** ವೆಂದು ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರು ದಿನಾಂಕ: 22-02-2014ರ ಟಿಪ್ಪಣಿ.

**<u>ನಿರ್ಣಯ:</u>**

**ಆಯುಕ್ತರ ದಿ: 22-02-2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**<u>ವಿಷಯದ ಸಂಖ್ಯೆ: ನಯೋಅಸ್ಥಾಸ/37/2013-14</u>**

ಮಾನ್ಯ ಆಯುಕ್ತರ ದಿ: 22-02-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ವಾರ್ಡ್ ಸಂಖ್ಯೆ ಃ 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಚಂದ್ರಾಬಡಾವಣೆ 2ನೇ ಮುಖ್ಯರಸ್ತೆಗೆ **"ಕಾಳಿಮಂದಿರ ರಸ್ತೆ"** ಎಂದು ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಪರಿಶೀಲಿಸಲಾಗಿ ನಾಮಕರಣ ಮಾಡಲು ಉದ್ದೇಶಿಸಲಾಗಿರುವ ರಸ್ತೆಯಲ್ಲಿ **ಕಾಳಿಮಂದಿರ** ಇರುತ್ತದೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 108 ಮಂದಿ, ವಿರೋಧವಾಗಿ 10 ಜನ ಸಹಿ ಮಾಡಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ

ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128 ನಾಗರಬಾವಿ ವ್ಯಾಪ್ತಿಯಲ್ಲಿ ಚಂದ್ರಾ ಬಡಾವಣೆ 2ನೇ ಮುಖ್ಯ ರಸ್ತೆಗೆ **"ಕಾಳಿಮಂದಿರ ರಸ್ತೆ"** ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 22-02-2014ರ ಟಿಪ್ಪಣಿ

**ನಿರ್ಣಯ:**

**ಆಯುಕ್ತರ ದಿ: 22-02-2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

**ವಿಷಯದ ಸಂಖ್ಯೆ: ನಯೋಅಸ್ಥಾಸ/ 38/2013-14**

ಮಾನ್ಯ ಆಯುಕ್ತರ ದಿ: 22-02-2014ರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಶ್ರೀ. ಕೆ. ಉಮೇಶ್ ಶೆಟ್ಟಿ, ಅಧ್ಯಕ್ಷರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ರವರು ಮನವಿ ಪತ್ರ ಸಲ್ಲಿಸಿ ವಾರ್ಡ್ ಸಂಖ್ಯೆ : 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಹಳೆಯ ಜನತಾ ಕಾಲೋನಿ ಪ್ರದೇಶಕ್ಕೆ **"ಹೊಯ್ಸಳ ನಗರ ನಾಗರಬಾವಿ ಪ್ರದೇಶವೆಂದು"** ನಾಮಕರಣ ಮಾಡಲು ಕೋರಿರುತ್ತಾರೆ.

ಈ ಬಗ್ಗೆ ಸಾರ್ವಜನಿಕ ಪಂಚನಾಮೆ ಜರುಗಿಸಲಾಗಿ ಪ್ರಸ್ತಾವನೆ ಪರವಾಗಿ 117 ಮಂದಿ, ವಿರೋಧವಾಗಿ 15 ಮಂದಿ ಸಹಿ ಮಾಡಿರುವುದು ಕಂಡು ಬಂದಿರುತ್ತದೆ.

ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976, 293ನೇ ಪ್ರಕರಣದ (1) ನೇ ಉಪ ಪ್ರಕರಣದ ಅನುಸಾರ ಪ್ರತಿಯೊಂದು ಪ್ರಸ್ತಾವನೆಯನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿಯು 5, 6 ಮತ್ತು 7ನೇ ನಿಯಮಗಳ ಉಪಬಂಧಗಳ ದೃಷ್ಟಿಯಿಂದ ಪರಿಶೀಲಿಸತಕ್ಕದ್ದು ಮತ್ತು ನಗರಪಾಲಿಕೆಯು ಗೊತ್ತುವಳಿಯನ್ನು ಅಂಗೀಕರಿಸತಕ್ಕದ್ದು. ಆನಂತರ ಅದನ್ನು, ಕನಿಷ್ಟ ಎರಡು ವೃತ್ತ ಪತ್ರಿಕೆಗಳಲ್ಲಿ ವಿಶೇಷವಾಗಿ, ಕನ್ನಡ ಪತ್ರಿಕೆಗಳಲ್ಲಿ, ಅದರಿಂದ ಬಾಧಿತರಾಗಬಹುದಾದ ವ್ಯಕ್ತಿಗಳಿಗೆ ಮಾಹಿತಿಗಾಗಿ ಮತ್ತು ಅದು ಪ್ರಕಟವಾದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಆಹ್ವಾನಿಸಿ ಪ್ರಕಟಿಸತಕ್ಕದ್ದು. ಮೇಲೆ ಹೇಳಿಕೆ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳು ಬಂದರೆ, ಆಕ್ಷೇಪಣೆಗಳು

ಮತ್ತು ಸಲಹೆಗಳನ್ನು ಪರಿಶೀಲಿಸುವುದಕ್ಕಾಗಿ ನಗರ ಪಾಲಿಕೆಯ ಮುಂದಿನ ಸಭೆಯಲ್ಲಿ ಅವುಗಳನ್ನು ಮಂಡಿಸತಕ್ಕದ್ದು. ರಾಜ್ಯ ಸರ್ಕಾರದ ಯಾವುದೇ ನಿರ್ದೇಶನಗಳಿದ್ದರೆ ಅವುಗಳಿಗೆ ಒಳಪಟ್ಟು ಗೊತ್ತುವಳಿಯನ್ನು ಅಂಗೀಕರಿಸಿದ ಮೇಲೆ ಅದರಂತೆ ನಗರ ಪಾಲಿಕೆಯ ಬೀದಿಗೆ ನಾಮಕರಣ ಮಾಡವುದಕ್ಕೆ ಕ್ರಮ ಕೈಗೊಳ್ಳತಕ್ಕದ್ದೆಂದು ಉಲ್ಲೇಖಿಸಲಾಗಿದೆ

ಆದುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ: 128 ನಾಗರಬಾವಿ ವ್ಯಾಪ್ತಿಯಲ್ಲಿ ಬರುವ ಹಳೆಯ ಜನತಾ ಕಾಲೋನಿ ಪ್ರದೇಶಕ್ಕೆ **"ಹೊಯ್ಸಳ ನಗರ ನಾಗರಬಾವಿ ಪ್ರದೇಶವೆಂದು** ಎಂದು ನಾಮಕರಣ ಮಾಡುವ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಮಂಡಿಸಿರುವ ಮಾನ್ಯ ಆಯುಕ್ತರ ದಿನಾಂಕ: 22-02-2014ರ ಟಿಪ್ಪಣಿ

**ನಿರ್ಣಯ:**

**ಆಯುಕ್ತರ ದಿ: 22-02-2014ರ ಟಿಪ್ಪಣಿಯನ್ನು ಒಪ್ಪಲು ಸಮಿತಿಯು ತೀರ್ಮಾನಿಸಿತು.**

ಸಭೆಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

**ಅಧ್ಯಕ್ಷರು,**
**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.**

**ಪ್ರತಿಯನ್ನು:**

1. ಪೂಜ್ಯ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ಮಾನ್ಯ ಉಪ ಮಹಾಪೌರರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರು, ಜೆ.ಡಿ.ಎಸ್.ಪಕ್ಷದ ನಾಯಕರು, ಸದಸ್ಯರು ರವರ ಮಾಹಿತಿಗಾಗಿ ಕಳುಹಿಸಿದೆ.
4. ಎಲ್ಲಾ ಸ್ಥಾಯಿ ಸಮಿತಿಯ ಅಧ್ಯಕ್ಷರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಸಮಿತಿಯ ಸದಸ್ಯರು ರವರ ಮಾಹಿತಿಗಾಗಿ ಕಳುಹಿಸಿದೆ.
6. ಮಾನ್ಯ ಆಯುಕ್ತರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
7. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
8. ಅಪರ ಆಯುಕ್ತರು (ಆಸ್ತಿಗಳು) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
9. ಕೌನ್ಸಿಲ್ ಕಾರ್ಯದರ್ಶಿರವರ ಅವಗಾಹನೆಗೆ ಸಲ್ಲಿಸಿದೆ.
10. ಉಪ ಆಯುಕ್ತರು (ಆಸ್ತಿಗಳು/ಕಂದಾಯ/ಜಾಹಿರಾತು/ಭೂಸ್ವಾಧಿನ) ರವರ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
11. ಕಾನೂನು ಕೋಶದ ಮುಖ್ಯಸ್ಥರು ರವರ ಮಾಹಿತಿಗಾಗಿ ಕಳುಹಿಸಿದೆ.
12. ಕಛೇರಿ ಕರಡು ಪ್ರತಿ.